# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 507 (610) |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20.08.2026 |
| 4 | ಉತ್ತರಿಸುವ ಸಚಿವರು | : | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

*****

| ಪ್ರಶ್ನೆ | | ಉತ್ತರ |
|---|---|---|
| ಅ) | ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2026-27ನೇ ಸಾಲಿನ ಪ್ರಾರಂಭದಿಂದ ಇಲ್ಲಿಯವರೆಗೆ ಅನುದಾನವನ್ನು ಬಿಡುಗಡೆ ಮಾಡದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; | -ಇಲ್ಲ-<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2026-27ನೇ ಸಾಲಿನ ಮೊದಲನೇ ಕಂತಿನ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 72 ಕೆಎಲ್ ಎಸ್ 2026, ದಿನಾಂಕ:25.05.2026ರಂದು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ. |
| ಆ) | ಆರ್ಥಿಕ ವರ್ಷ ಪ್ರಾರಂಭಗೊಂಡು 5 ತಿಂಗಳು ಕಳೆದರೂ ಈ ಬಗ್ಗೆ ಸರ್ಕಾರ ಗಮನಹರಿಸದಿರಲು ಕಾರಣವೇನು; ಸರ್ಕಾರದ ಖಜಾನೆಯಲ್ಲಿ ಹಣವಿದೆಯೇ ಅಥವಾ ಇಲ್ಲವೇ?; | ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 265 ಎಫ್‌ಆರ್ 2024, ದಿನಾಂಕ:02.12.2025ರ ಆದೇಶದಲ್ಲಿ, ಸರ್ಕಾರದಿಂದ ಅನುದಾನ ಪಡೆದು ಖಜಾನೆಯ ಠೇವಣಿ ಖಾತೆಯಲ್ಲಿಟ್ಟು ನಿರ್ವಹಿಸುತ್ತಿರುವ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು State PFMS module ಗೆ ಆನ್‌ಬೋರ್ಡ್ ಆಗಿ ತಮ್ಮ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ಸೂಚಿಸಲಾಗಿದೆ.<br><br>ಆರ್ಥಿಕ ಇಲಾಖೆಯ ಆದೇಶದಂತೆ, ಯೋಜನಾ ಇಲಾಖೆಯಿಂದ SNA ಖಾತೆಯನ್ನು ತೆರೆದು, ದಿನಾಂಕ:31.03.2026ರ ಅಂತ್ಯಕ್ಕೆ ಪಿ.ಡಿ. ಖಾತೆಯಲ್ಲಿದ್ದ ಅನುದಾನವನ್ನು ಹೊಸದಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿರುತ್ತದೆ.<br><br>ಆದರೆ, ಆರ್ಥಿಕ ಇಲಾಖೆಯು State PFMS Module ಗೆ ಆನ್ ಬೋರ್ಡ್ ಆಗಿ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ಸೂಚಿಸಲಾಗಿದ್ದ, ತಂತ್ರಾಂಶದಲ್ಲಿ, ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹಾಗೂ ಪಿ.ಡಿ. ಖಾತೆಯಲ್ಲಿ ವ್ಯವಹರಿಸುತ್ತಿದ್ದ Panchayat Raj Engineering Department (PRED) ಮತ್ತು Rural Water Supply Department (RWSD)-ಈ ಅನುಷ್ಠಾನ ಇಲಾಖೆಗೆ ಅನುದಾನ ವರ್ಗಾವಣೆ ಮಾಡಲು ಅವಕಾಶವಿರಲಿಲ್ಲ. |

| | ಪ್ರಶ್ನೆ | ಉತ್ತರ |
|---|---|---|
| | | ಆದ ಕಾರಣ, ದಿನಾಂಕ:01.07.2026 ರಂದು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ, ಹೊಸದಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದು ಕೆಲ್ಯಾಡ್ಸ್ ಯೋಜನೆಯನ್ನು ನಿರ್ವಹಣೆ ಮಾಡಲು ದಿನಾಂಕ:07.07.2026 ರಂದು ಜಿಲ್ಲಾಧಿಕಾರಿಗಳ ಹಂತದಲ್ಲಿ ಮತ್ತು ದಿನಾಂಕ:14.07.2026 ರಂದು ಉಪವಿಭಾಗಾಧಿಕಾರಿಗಳ ಹಂತದಲ್ಲಿ ನಿರ್ವಹಿಸಲು ಅವಕಾಶ ಕಲ್ಪಿಸಿರುತ್ತದೆ.<br><br>ಅದರಂತೆ, ಎಲ್ಲಾ 31 ಜಿಲ್ಲಾಧಿಕಾರಿಗಳಿಂದ ಮತ್ತು 41 ಉಪವಿಭಾಗಾಧಿಕಾರಿಗಳ ಪೈಕಿ ಹುಣಸೂರು ಹೊರತು ಪಡಿಸಿ 40 ಉಪವಿಭಾಗಾಧಿಕಾರಿಗಳ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು, ಮೊದಲನೇ ಕಂತಿನ ಅನುದಾನ ಜಮೆ ಮಾಡಲಾಗಿದೆ. ಪ್ರಸ್ತುತ, ಎರಡನೇ ಕಂತಿನ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗಿದೆ.<br><br>ಹೊಸ ವ್ಯವಸ್ಥೆಯನ್ನು ಜಾರಿ ಮಾಡಿರುವುದರಿಂದ ಬ್ಯಾಂಕ್ ಖಾತೆಗಳನ್ನು ತೆರೆದು ಅನುದಾನ ಜಮೆ ಮಾಡುವುದರಲ್ಲಿ ಆಗಿರುವ ಕಾಲಾವಕಾಶ ಹೊರತುಪಡಿಸಿ, ಅನುದಾನ ಬಿಡುಗಡೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. |
| ಇ) | ಯಾವ ಕಾಲಮಿತಿಯಲ್ಲಿ ಸಂಬಂಧಪಟ್ಟ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುತ್ತೀರಿ (ಸಂಪೂರ್ಣ ವಿವರವನ್ನು ಒದಗಿಸುವುದು) | ಆರ್ಥಿಕ ಇಲಾಖೆಯ ಸಹಮತಿ ಮೇರೆಗೆ ಮೊದಲನೇ ಕಂತಿನ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ. ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವುದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ ಕರ್ತವ್ಯವಾಗಿರುತ್ತದೆ. |

ಸಂಖ್ಯೆ:ಪಿಡಿಎಸ್/ಕೆಎಲ್ಎಸ್/111/2026

(ಬಿ. ನಾಗೇಂದ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು